ಮಾಡಬೇಕು ಅನ್ನೊ ಕಲ್ಪನೆಯಿಂದ. ಇದು ನನ್ನ ಕಲ್ಪನೆ ಅಲ್ಲ. ಆಗ ಹಂಪನಾ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು. ಅವರ ನೇತೃತ್ವದಲ್ಲಿ ಧರ್ಮಸ್ಥಳದೊಳಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ (1979). ಗೋಪಾಲಕೃಷ್ಣ ಅಡಿಗರು ಸಮ್ಮೇಳನಾಧ್ಯಕ್ಷರು. 'ಈ ಸಮ್ಮೇಳನಕ್ಕೆ ಪರ್ಯಾಯವಾದ ಸಮ್ಮೇಳನ ಮಾಡಬೇಕು, ಯಜಮಾನ ಸಂಸ್ಕೃತಿಗೆ ಪ್ರತಿರೋಧ ಒಡ್ಡಬೇಕು' ಎಂಬ ಚಿಂತನೆ ಹೊತ್ತ ಡಿ.ಆರ್. ನಾಗರಾಜ್, ಕಾಳೇಗೌಡ ನಾಗವಾರ, ಸಿದ್ದಲಿಂಗಯ್ಯ ಅವರು ನನ್ನನ್ನು ಸಂಚಾಲಕರಲ್ಲಿ ಒಬ್ಬನಾಗಲು ಕೇಳಿಕೊಂಡರು. ಆಗ ನಾನು 'ಒಂದು ಸಮ್ಮೇಳನಕ್ಕೆ ನಿಲ್ಲಿಸುವುದು ಸರಿಯಲ್ಲ. ಇದನ್ನೊಂದು ಸಂಘಟನೆಯಾಗಿ, ಚಳವಳಿಯಾಗಿ ರೂಪಿಸಬೇಕು, ಹಾಗಿದ್ದರೆ ಮಾತ್ರ ನಾನು ಒಬ್ಬ ಸಂಘಟಕನಾಗುವೆ' ಎಂದು ಹೇಳಿದೆ. ನಾನು ಹಾಗೆ ಹೇಳಲು ಕಾರಣವಿತ್ತು. 1975ರಲ್ಲಿ ಅಂತ ಕಾಣುತ್ತೆ. 'ಕನ್ನಡ ಸಣ್ಣಕತೆ : ಹೊಸ ಆಶಯ' ಎಂಬ ಲೇಖನ ಬರೆದಿದ್ದೆ. ಅದು ಅಕ್ಷರ ಪ್ರಕಾಶನದವರು ಆವಾಗ ಜಿ.ಎನ್. ರಂಗನಾಥರಾವ್ ಅವರ ಸಂಪಾದಕತ್ವದಲ್ಲಿ ತಂದ 'ಅಕ್ಷರ ಸಂಚಿಕೆ'ಯಲ್ಲಿ ಪ್ರಕಟವಾಗಿತ್ತು. ಅದೊಂದು ವಿಶೇಷ ಸಂಚಿಕೆ. ಅದರಲ್ಲಿ ಹೊಸ ಚಳವಳಿಯೊಂದಕ್ಕೆ ಕನ್ನಡ ಸಾಹಿತ್ಯವು ಹದಗೊಂಡಿದೆಯೆಂಬ ಅರ್ಥ ಹೊಮ್ಮಿಸುವ ಪ್ಯಾರಾವೊಂದನ್ನು ಬರೆದು ಅದಕ್ಕೆ ಪೂರಕ ಕಥಾವಸ್ತು ಸಾಮಗ್ರಿ ಒದಗಿಸಿದ್ದೆ. ಹೀಗಾಗಿ, ಕನ್ನಡ ಸಾಹಿತ್ಯದಲ್ಲಿ ಹೊಸ ಚಳವಳಿಯೊಂದರ ಉದಯಕ್ಕೆ ಪೂರಕವಾದ ಬೆಳವಣಿಗೆಗಳು ನಮ್ಮ ಸಾಮಾಜಿಕ, ಸಾಂಸ್ಕೃತಿಕ ವಲಯದಲ್ಲಿ ಸಂಭವಿಸಿದ್ದವೆಂಬುದು ನನ್ನ ಖಚಿತ ಅಭಿಪ್ರಾಯವಾಗಿತ್ತು. ದಲಿತ ಸಂಘರ್ಷ ಸಮಿತಿ ಕ್ರಿಯಾಶೀಲವಾಗಿತ್ತು. 'ಸಮುದಾಯ' ರಂಗಸಂಘಟನೆಯು ಚಲನಶೀಲವಾಗಿತ್ತು. ಕನ್ನಡ ಕಥಾಸಾಹಿತ್ಯದಲ್ಲಿ ಸಾಮಾಜಿಕ ಕಾಳಜಿಯ ಗಟ್ಟಿ ಗುರುತುಗಳು ಕಾಣಿಸಿಕೊಳ್ಳತೊಡಗಿದವು. ಗ್ರಾಮೀಣ ಅನುಭವಗಳ ಅನಾವರಣವಾಗತೊಡಗಿತ್ತು. ಈ ಎಲ್ಲ ಅಂಶಗಳೂ ನನ್ನ ಮನಸ್ಸಿನಲ್ಲಿ ಇದ್ದವು. ಸ್ನೇಹಿತರು ಒಪ್ಪಿದರು. ಸಮ್ಮೇಳನ ಯಶಸ್ವಿಯಾಯಿತು. ಸಂಘಟನೆಯ ರೂಪಕೊಟ್ಟು ನನ್ನನ್ನು, ಸಿದ್ದಲಿಂಗಯ್ಯ ಮತ್ತು ಇಂದೂಧರ ಹೊನ್ನಾಪುರ ಅವರನ್ನು ರಾಜ್ಯ ಸಂಚಾಲಕರಾಗಿ ಮಾಡಲಾಯಿತು. ಮುಂದೊಮ್ಮೆ ಒಬ್ಬರೇ ರಾಜ್ಯ ಸಂಚಾಲಕರು ಸಾಕು ಎಂದು ನನ್ನನ್ನು ಆಯ್ಕೆ ಮಾಡಲಾಯಿತು. ಸಾಮಾಜಿಕ ಕಾಳಜಿಯ ಸೃಷ್ಟಿಶೀಲತೆಗೆ ಹದಗೊಂಡ ಕನ್ನಡದ ಮನಸ್ಸುಗಳ ಫಲವಾಗಿ ಸಂಘಟನೆಯು ಚಳವಳಿಯಾಯಿತು.

◆ **ಲೇಖಕರಾದವರಿಗೆ ಸಂಘಟನೆಯ ಅಗತ್ಯವಿದೆಯೆ? ಹೀಗಾದಾಗ ಪರಸ್ಪರರ ನಿಷ್ಠುರ ವಿಮರ್ಶೆ, ಚರ್ಚೆ ಸಾಧ್ಯವೆ? ಬಂಡಾಯ ಸಂಘಟನೆಯ ಒಳಗಿನ ಲೇಖಕರಿಗೆ ಈ ಅಪಾಯ ತಟ್ಟಲಿಲ್ಲವೆ?**

ಲೇಖಕರಾದವರಿಗೆ ಸಂಘಟನೆಯ ಅಗತ್ಯ ಇದ್ದೇ ಇರಬೇಕೆಂದೇನೂ ಇಲ್ಲ. ಆದರೆ, ಸಂಘಟನೆಯ ಜೊತೆ ಗುರುತಿಸಿಕೊಂಡವರ ಬಗ್ಗೆ ಅನಗತ್ಯ ಪೂರ್ವಗ್ರಹ ಇರಬೇಕಾಗಿಲ್ಲ. ಸಂಘಟನೆಯೊಂದರ ಜೊತೆ ಗುರುತಿಸಿಕೊಳ್ಳದೇ ಇರುವವರೂ ಪ್ರಗತಿಪರ ಆಶಯವನ್ನು ಹೊಂದಿರಬಹುದು. ಸಂಘಟನೆಯ ಭಾಗವಾದವರು ಎಂಬ ಕಾರಣಕ್ಕೇ ಪೂರ್ವಗ್ರಹದ ವಿಮರ್ಶೆಗೆ ತೊಡಗಬಾರದು. ಹಾಗೆಯೇ ಸಂಘಟನೆಯ ಭಾಗವಾಗಿಲ್ಲ ಎಂಬ ಕಾರಣಕ್ಕೇ ಅಂಥವರ ಬಗ್ಗೆಯೂ ಪೂರ್ವಗ್ರಹ ಸಲ್ಲದು. ಸಂಘಟನೆ ಮತ್ತು ಚಳವಳಿಯ ಜೊತೆಗಿದ್ದರೆ ಸೃಜನಶೀಲತೆಗೆ ಧಕ್ಕೆ ಎನ್ನುವುದನ್ನು ನಾನು ಒಪ್ಪಲಾರೆ. ಇದು 'ಸಿದ್ಧ ಸೃಜನಶೀಲ ಪರಿಕಲ್ಪನೆ'ಯ ಅಭಿಪ್ರಾಯ. ಸಂಘಟನೆಯೊಂದು ಬದುಕಿನ ಚಲನಶೀಲತೆಯನ್ನೂ ಸಾಮಾಜಿಕ ಕಾಳಜಿಯ ಮೌಲ್ಯವನ್ನೂ ಗೌರವಿಸುತ್ತ ಬೆಳೆಯುತ್ತಿದ್ದರೆ ಅದಕ್ಕೊಂದು ಮಾನವೀಯ ಆಯಾಮ ಇದ್ದೇ ಇರುತ್ತದೆ. ಈ ಅರ್ಥದಲ್ಲಿ ಬಂಡಾಯ ಸಂಘಟನೆ ಸೃಜನಶೀಲ. ಚಳವಳಿಯು ಚಲನಶೀಲ. ಆದರೂ ಇಂಥ ಸಂಘಟನೆ ಮತ್ತು ಚಳವಳಿಗಳನ್ನು